ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 991
ಮಾನ್ಯ ಸದಸ್ಯರ ಹೆಸರು : ಶ್ರೀ ಗೋವಿಂದ ರಾಜು (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 20-9-2021
ಉತ್ತರಿಸುವ ಸಚಿವರು : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ	ರಾಜ್ಯದ ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ತೀವ್ರ ನಿಗಾ ಘಟಕ (ICU) ಗಳನ್ನು ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ತೀವ್ರ ನಿಗಾ ಘಟಕಗಳನ್ನು ಈಗಾಗಲೇ ತೆರೆಯಲಾಗಿದೆ.
ಆ	ಹಾಗಿದ್ದಲ್ಲಿ ರಾಜ್ಯದ ಯಾವ ಯಾವ ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ತೀವ್ರ ನಿಗಾಘಟಕ (ICU)ಗಳನ್ನು ಪ್ರಾರಂಭಿಸಲಾಗಿದೆಯೇ;	ರಾಜ್ಯದ 19 ಜಿಲ್ಲಾ ಮಟ್ಟದ ಆಸ್ಪತ್ರೆಗಳು ಮತ್ತು 146 ತಾಲ್ಲೂಕು ಆಸ್ಪತ್ರೆಗಳಲ್ಲಿ ಐ.ಸಿ.ಯು ಘಟಕಗಳನ್ನು ಪ್ರಾರಂಭಿಸಲಾಗಿದೆ.
ಇ	ತೀವ್ರ ನಿಗಾ ಘಟಕ (ICU) ಗಳನ್ನು ಪ್ರಾರಂಭಿಸಿರುವ ಎಲ್ಲಾ ಆಸ್ಪತ್ರೆಗಳಲ್ಲೂ ಅಗತ್ಯ ವೈದ್ಯಕೀಯ ಉಪಕರಣಗಳನ್ನು ಖರೀದಿಸಲಾಗಿದೆಯೇ; ಹಾಗಿದ್ದಲ್ಲಿ ಈ ಉಪಕರಣಗಳನ್ನು ಖರೀದಿಸುವಾಗ ಸರ್ಕಾರ ಅನುಸರಿಸುವ ಮಾನದಂಡಗಳೇನು;	ತೀವ್ರ ನಿಗಾ ಘಟಕಗಳನ್ನು ಪ್ರಾರಂಭಿಸಿರುವ ಎಲ್ಲಾ ಆಸ್ಪತ್ರೆಗಳಲ್ಲೂ ಅಗತ್ಯ ವೈದ್ಯಕೀಯ ಉಪಕರಣಗಳನ್ನು ಖರೀದಿಸಲಾಗಿದೆ. ಉಪಕರಣಗಳನ್ನು ಖರೀದಿಸುವಾಗ ಸರ್ಕಾರ ಅನುಸರಿಸುವ ಮಾನದಂಡಗಳು - ಅವಶ್ಯಕತೆಗೆ ಅನುಗುಣವಾಗಿ Need Assessment Committee ಯ ಶಿಫಾರಸ್ಸಿನೊಂದಿಗೆ Technical Specification Committee, Procurement Committee ಗಳಿಂದ ಅನುಮೋದಿಸಲಾದ ಉಪಕರಣಗಳನ್ನು ಕೆ.ಟಿ.ಪಿ.ಪಿ ನಿಯಮಾವಳಿ ಅನುಸ್ವಾರ ಖರೀದಿಸಲಾಗುತ್ತದೆ.
ಈ	ಈ ವೈದ್ಯಕೀಯ ಉಪಕರಣಗಳನ್ನು ಖರೀದಿಸಲು ಸರ್ಕಾರ ವೆಚ್ಚ ಮಾಡಿರುವ ಮೊತ್ತವೆಷ್ಟು;	ತೀವ್ರ ನಿಗಾ ಘಟಕ (ಐ.ಸಿ.ಯು.) ಗಳನ್ನು ಸ್ಥಾಪಿಸುವ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ (ರಿ) ಸಂಸ್ಥೆಯಿಂದ ರೂ. 26,23,48,914/- ಗಳಿಗೆ ಉಪಕರಣಗಳನ್ನು ಖರೀದಿಸಿ ನೀಡಲಾಗಿರುತ್ತದೆ. ವಿವರಗಳನ್ನು **ಅನುಬಂಧ-01** ರಲ್ಲಿ ಲಗತ್ತಿಸಿದೆ.

ಉ	ಈ ವೈದ್ಯಕೀಯ ಉಪಕರಣಗಳನ್ನು ಖರೀದಿಸಲು ಸರ್ಕಾರ ವೆಚ್ಚ ಮಾಡಿರುವ ಮೊತ್ತವು ವ್ಯರ್ಥವಾಗಿರುವುದು ನಿಜವೇ;	ಸರ್ಕಾರಿ ಆಸ್ಪತ್ರೆಗಳಲ್ಲಿ ಹಾಲಿ ತೀವ್ರ ನಿಗಾ ಘಟಕ (ಐ.ಸಿ.ಯ.) ಗಳು ಕಾರ್ಯನಿರ್ವಹಿಸುತ್ತಿದ್ದು, ಸಾರ್ವಜನಿಕರಿಗೆ ಅನುಕೂಲವಾಗುತ್ತಿರುವುದರಿಂದ ವೆಚ್ಚ ಮಾಡಿರುವ ಯಾವುದೇ ಮೊತ್ತವು ವ್ಯರ್ಥವಾಗಿರುವುದಿಲ್ಲ.
ಊ	ಈ ರಾಜ್ಯದ ಕೆಲವು ಆಸ್ಪತ್ರೆಗಳಲ್ಲಿ ಪ್ರಾರಂಭಿಸಿರುವ ತೀವ್ರ ನಿಗಾ ಘಟಕಗಳು ಕಾರ್ಯ ನಿರ್ವಹಿಸದೇ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ರಾಜ್ಯದ ಆಸ್ಪತ್ರೆಗಳಲ್ಲಿ ಪ್ರಾರಂಭಿಸಿರುವ ತೀವ್ರ ನಿಗಾ ಘಟಕಗಳು ಕಾರ್ಯನಿರ್ವಹಿಸದೇ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.
ಋ	ಹಾಗಿದ್ದಲ್ಲಿ, ಈ ಐಸಿಯು ಘಟಕಗಳು ಕಾರ್ಯ ನಿರ್ವಹಿಸದೇ ಸ್ಥಗಿತಗೊಂಡಿರುವ ಬಗ್ಗೆ ಮಹಾಲೇಖಪಾಲರು ಆಕ್ಷೇಪ ವ್ಯಕ್ತ ಪಡಿಸಿರುವುದು ನಿಜವೇ; ಹಾಗಿದ್ದಲ್ಲಿ ಈ ವೈದ್ಯಕೀಯ ಉಪಕರಣಗಳು ಸರಿಯಾಗಿ ಕಾರ್ಯನಿರ್ವಹಿಸದಿರಲು ಕಾರಣಗಳೇನು; (ವಿವರಗಳನ್ನು ನೀಡುವುದು)	ಈ ಬಗ್ಗೆ ಮಹಾಲೇಖಪಾಲರಿಂದ ಯಾವುದೇ ಆಕ್ಷೇಪಗಳು ವ್ಯಕ್ತವಾಗಿರುವುದಿಲ್ಲ. ಐ.ಸಿ.ಯು ಘಟಕಗಳು ಕಾರ್ಯ ನಿರ್ವಹಿಸದೇ ಸ್ಥಗಿತಗೊಂಡಿರುವ ಬಗ್ಗೆ ಮಾಹಿತಿ ಸ್ವೀಕೃತವಾಗಿರುವುದಿಲ್ಲ.

ಆಕುಕ 134 ಎಸ್.ಎಂ.ಎಂ. 2021

(ಡಾ: ಕೆ. ಸುಧಾಕರ್)
ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು